# ತಂಬೆಲರು

## ಪ್ರಾಚಾರ್ಯ ಜಿ. ಎಸ್. ಬಿಜಾಪೂರ ಅಭಿನಂದನ ಸಂಪುಟ



ಪ್ರಾಚಾರ್ಯ ಜಿ. ಎಸ್. ಬಿಜಾಪೂರ ಅಭಿನಂದನ ಸಮಿತಿ, ಬಾಗಲಕೋಟೆ

# ತಂಬೆಲರು

(ಪ್ರಾಚಾರ್ಯ ಜಿ. ಎಸ್. ಬಿಜಾಪೂರ ಅಭಿನಂದನಾ ಸಂಪುಟ)

ಪ್ರಧಾನ ಸಂಪಾದಕರು

**ಡಾ. ನಾಗರಾಜ ಪಿ. ನಾಡಗೌಡರ**

ಸಂಪಾದಕರು

**ಡಾ. ಮೈನುದ್ದೀನ್ ರೇವಡಿಗಾರ**

ಸಹ ಸಂಪಾದಕರು

**ಡಾ. ಬಸನಗೌಡ ಬಿರಾದಾರ**

**ಡಾ. ನಾಗರಾಜ ಹ. ಮುದಕಪ್ಪನವರ**

ಪ್ರಕಾಶಕರು

**ಪ್ರಾಚಾರ್ಯ ಜಿ. ಎಸ್. ಬಿಜಾಪೂರ ಅಭಿನಂದನಾ ಸಮಿತಿ**

ಬಾಗಲಕೋಟೆ

**TAMBELARU : (Pracharya G. S. Bijapur Abhinandan Samputa)**

First Edition : 2020
Copies : 1000
Publisher : Rachana C. Angadi
Pracharya G. S. Bijapur Abhinandan Samiti
Bagalkote
Pages : xvi + 546 = 572
Price : **Rs. 350/-**
Book Size : Demy 1/8
Paper Used : 70 GSM N.S. Maplitho

**ತಂಬೆಲರು**

© ಹಕ್ಕುಗಳು : ಸಂಪಾದಕರದ್ದು
ಪ್ರಥಮ ಮುದ್ರಣ : ೨೦೨೦
ಪ್ರತಿಗಳು : ೧೦೦೦
ಪ್ರಕಾಶಕರು : ರಚನಾ ಚಂ. ಅಂಗಡಿ
ಪ್ರಾಚಾರ್ಯ ಜಿ. ಎಸ್. ಬಿಜಾಪೂರ
ಅಭಿನಂದನಾ ಸಮಿತಿ, ಬಾಗಲಕೋಟೆ
ಪುಟಗಳು : xvi + ೫೪೬ = ೫೭೨
ಬೆಲೆ : **ರೂ. ೩೫೦/-**
ಪುಸ್ತಕದ ಆಕಾರ : ಡೆಮಿ ೧/೮
ಬಳಸಿದ ಕಾಗದ : ೭೦ ಜಿಎಸ್‌ಎಮ್ ಎನ್.ಎಸ್. ಮ್ಯಾಪ್‌ಲಿಥೋ

**ಮುದ್ರಕರು :**
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ವಿಠ್ಠಲ ಮಂದಿರ ರೋಡ, ಗದಗ– 582 101
Email : chaitanyaoffset@gmail.com
Mobile : 8884495331, 9448223602

❖

# ಜನಪದ ಸಾಹಿತ್ಯ ಧಾರ್ಮಿಕ ಆಚರಣೆಯ ಪದಗಳು

• ಡಾ. ತಿಪ್ಪೇಸ್ವಾಮಿ ಡಿ. ಎಸ್.

ಧಾರ್ಮಿಕ ಆಚರಣೆಯ ಪದಗಳು ಋತುಮಾನಕ್ಕನುಸಾರವಾಗಿ ಹಳ್ಳಿಗರ ಜನ ಜೀವನದಲ್ಲಿ ಭಕ್ತಿಯ ಪ್ರಭಾವದಿಂದ ಮೂಡಿ ಬಂದಿವೆ. ಜನರು ತಾವು ಕೈಗೊಳ್ಳುವ ವ್ರತಾಚರಣೆ, ವಿಧಿ ಕ್ರಿಯೆಗಳ, ಉತ್ಸವ, ನೃತ್ಯ, ಹಾಡು, ಸ್ತುತಿ, ಕಥೆ ಮೊದಲಾದವುಗಳು ಆಸಕ್ತಿಯ ಜೊತೆಗೆ ಬೆಳೆದು ಬಂದಿವೆ.

ಧಾರ್ಮಿಕ ಆಚರಣೆಯ ಹಬ್ಬಗಳನ್ನು ಗ್ರಾಮ, ಜಾತಿ ಮತ್ತು ಕುಟುಂಬ ಮಟ್ಟದ ಹಬ್ಬಗಳನ್ನಾಗಿ ವಿಂಗಡಿಸಿಕೊಳ್ಳಬಹುದು. ಜನಪದರು ತಮ್ಮ ಸಂಸ್ಕೃತಿಗೆ ಅನುಗುಣವಾಗಿ ಹಬ್ಬಗಳನ್ನು ಆಚರಿಸುತ್ತ ಬಂದಿದ್ದಾರೆ. ಹೀಗೆ ಜನಪದರ ಹಬ್ಬಗಳಲ್ಲಿ ಫಲಶಕ್ತಿಯನ್ನು ಪಡೆಯಲು ಆಚರಿಸುವ ಹಬ್ಬಗಳೂ ಮುಖ್ಯವಾದವು. ಈ ಸಮಾಜದಲ್ಲಿ, ಜಾತಿ ಮತಗಳಿಗೆ ನೇರ ಸಂಬಂಧವಿರುವುದರಿಂದ ಜನಪದ ಹಬ್ಬಗಳು ಅವರವರಿಗೆ ಅನುಗುಣವಾಗಿ ಆಚರಿಸಲ್ಪಡುತ್ತವೆ. ಇನ್ನೂ ಕೆಲವು ಜನಪದ ಹಬ್ಬಗಳು ಋತುಮಾನಕ್ಕನುಗುಣವಾಗಿ ನಡೆಯುತ್ತವೆ. ಕೆಲವು ಸಂಪ್ರದಾಯಗಳು ಮಳೆಗಾಲ, ಚಳಿಗಾಲ ಮತ್ತು ಬೇಸಿಗೆಯಲ್ಲಿ ಆಚರಿಸಲಾಗುತ್ತದೆ.

ಜನಪದ ಸಾಹಿತ್ಯದ ಧಾರ್ಮಿಕ ಆಚರಣೆಗಳು ಋತುಮಾನಕ್ಕನುಸಾರವಾಗಿ ಜರುಗುತ್ತವೆ. ಅವುಗಳನ್ನು ಹೀಗೆ ನೋಡಬಹುದು:

### ನಾಗರಪಂಚಮಿ

ನಾಗರಪಂಚಮಿ ಕರ್ನಾಟಕದ ಉದ್ದಗಲಕ್ಕೂ ಆಚರಿಸುವಂತಹ ಹಬ್ಬ. ಈ ಹಬ್ಬ ವಿಶೇಷವಾಗಿ ಮಹಿಳೆಯರ ಹಬ್ಬ, ಶ್ರಾವಣ ಮಾಸದಲ್ಲಿ ಬರುವ ಪ್ರಮುಖ ಹಬ್ಬಗಳಲ್ಲಿ ನಾಗರಪಂಚಮಿಯೇ ಮುಖ್ಯವಾದದ್ದು.

ಸರ್ಪವು ಶಿವನ ಆಭರಣವಾಗಿಯೂ, ಗಣಪತಿಯ ಹೊಟ್ಟೆಯ ಹಗ್ಗವಾಗಿಯೂ, ವಿಷ್ಣುದೇವನಿಗೆ ಹಾಸಿಗೆಯಾಗಿಯೂ, ಇಡೀ ಭೂಮಂಡಲವನ್ನೇ ಆದಿಶೇಷ ಹೊತ್ತು ನಿಂತಿದ್ದಾನೆ ಎಂದು ಜನರ ನಂಬಿಕೆಯಾಗಿದೆ. ವಿಷ ಸರ್ಪಗಳಿಂದ ಕೇಡಕು ಉಂಟಾಗದಿರಲೆಂಬ ಹಿನ್ನೆಲೆಯಿಂದ ಆದಿಶೇಷನನ್ನು ಪೂಜಿಸುವ ಸಂಪ್ರದಾಯ ಬೆಳೆದು ಬಂದಿದೆ.

ನಾಗರಪಂಚಮಿ ಹಬ್ಬ "ನಾಗರ ಪೂಜಾರಾಧನೆ ಕಥೆ"ಯಲ್ಲಿ ಈ ರೀತಿಯಾಗಿ ಕಂಡು ಬಂದಿದೆ. "ಒಬ್ಬ ರೈತ ತನ್ನ ಹೊಲವನ್ನು ರಂಟೆ ಹೊಡೆಯುವಾಗ ರಂಟೆಯ ಕುಳಕ್ಕೆ ಹಾವಿನ ಮರಿಗಳು ಸಿಕ್ಕಿ ಸತ್ತು ಹೋಗುತ್ತವೆ. ಆಗ ಹಾವಿನ ತಾಯಿಗೆ ಸಿಟ್ಟು ಬಂದು ಆ ರೈತನ ಮೇಲೆ ಸೇಡುತೀರಿಸಲು ಮುಂದಾಯಿತು. ಅಂದು ರೈತನನ್ನು, ಅವನ ಕುಟುಂಬದವರೆಲ್ಲರನ್ನು ಕಚ್ಚಿಕೊಂದಿತು. ಇನ್ನೇನು ರೈತನ ಮಗಳನ್ನು ಕೊಲ್ಲಬೇಕೆಂದು ಹೊರಟಿತು. ರೈತನ ಮಗಳು ಗಂಡನ ಮನೆಯಲ್ಲಿದ್ದಳು. ಹಾವು ಅಲ್ಲಿಗೆ ಹೋಯಿತು. ಆಗ ಆಕೆ ಮಣ್ಣಿನಿಂದ ನಾಗಪ್ಪನನ್ನು ಮಾಡಿ ಹಾಲೆರೆದು ಪೂಜಿಸುತ್ತಿದ್ದಳು. ಅದನ್ನು ಕಂಡು ಅದರ ಸಿಟ್ಟು ತಣ್ಣಗಾಯಿತು. ಆಗ ನಾಗರಹಾವು ತಾನು ಕಚ್ಚಿಕೊಂದು ಆಕೆಯ ತಂದೆ ತಾಯಿಯರ ವಿವರವನ್ನೆಲ್ಲ ಅವಳಿಗೆ ತಿಳಿಸಿತು. ಅದನ್ನು ಕೇಳಿ ಮಗಳು ಬೋರಿಟ್ಟು ದುಃಖಿಸಿ ಅಳತೊಡಗಿದಳು. ತನ್ನ ತವರಿನ ಎಲ್ಲರನ್ನು ಬದುಕಿಸಿಕೊಡು ಎಂದು ಬೇಡಿಕೊಂಡಳು. ಆಗ ನಾಗರಹಾವಿಗೆ ಕರುಣೆಹುಟ್ಟಿ ರೈತನ ಮಗಳೊಂದಿಗೆ ತವರಿಗೆ ಬಂದು ಎಲ್ಲರ ದೇಹದಲ್ಲಿದ್ದ ವಿಷ ಹೀರಿ ಅವರೆಲ್ಲರನ್ನು ಪ್ರಾಣಾಪಾಯದಿಂದ ಪಾರು ಮಾಡಿತು. ಎಲ್ಲರು ಎಚ್ಚೆತ್ತು ನಾಗರಪಂಚಮಿ ಹಬ್ಬವನ್ನು ಆಚರಿಸತೊಡಗಿದರು. ಈ ಮೂಲಕ ನಾಗರಪಂಚಮಿ ಹಬ್ಬಕ್ಕೆ ತಂಗಿಯನ್ನು ಕರೆ ತರುವ ಸಂಪ್ರದಾಯ ಬೆಳೆದು ಬಂದಿತು.

ನಾಗರಪಂಚಮಿ ಹಬ್ಬಕ್ಕೆ ತವರು ಮನೆಗೆ ಬರಲು ಬಯಸುವ ತಂಗಿಯ ಬಯಕೆ "ನಾಗರಪಂಚಮಿ ಹಾಡು"ಗಳಲ್ಲಿ ಈ ರೀತಿ ವ್ಯಕ್ತಗೊಂಡಿದೆ :

"ನಾಗರಪಂಚಮಿ ನಾಡಿಗೆ ದೊಡ್ಡದು
ಅಣ್ಣ ಬರಲಿಲ್ಲವ್ವ ಕರಿಯದಕೆ । ಸುವೇಲಾಲಿ ॥ ಪಲ್ಲವಿ ॥

ನಮ್ಮಣ್ಣ ಸಾವುಕಾರ ಸಂತೆಪೇಟೆಗೆ ಅಧಿಕಾರಿ
ಈ ಮಾತು ಯಾರ ಮುಂದೆ ಹೇಳಿಕೊಳ್ಳಲಿ । ಸುವೇಲಾಲಿ

ಯಾಕವ್ವ ನಮ್ಮ ತಂಗಿ ಯಾಂತವ್ವ ನಮ್ಮ ತಂಗಿ
ಮೀರಿ ಹೋಗಿಲೇಳ ನಾಗರಪಂಚಮಿ । ಸುವೇಲಾಲಿ

ಹೀಗೆ ನಾಗರಪಂಚಮಿ ಹಬ್ಬಕ್ಕೆ ತವರು ಮನೆಗೆ ಹೋಗಿ ಹಾಲು ಎರೆಯಬೇಕು ಎಂಬುದು ತಂಗಿಯ ಆಸೆ. ಅಣ್ಣ ಬರಲಿಲ್ಲ ಎಂದು ತಂಗಿ ಎದುರು ನೋಡುತ್ತಾ

ಇರುತ್ತಾಳೆ. ಆಗ ಅಣ್ಣ ಬಂದು ತಂಗಿಯ ಅತ್ತೆ, ಮಾವರನ್ನು ಕೇಳಿ ತಂಗಿಯನ್ನು ತವರಿಗೆ ಕರೆದುಕೊಂಡು ಹೋಗುವ ಚಿತ್ರಣ ಒಂದು ಪದ್ಯದಲ್ಲಿ ಹೀಗೆ ಮೂಡಿ ಬಂದಿದೆ

"ನಾಗರಪಂಚಮಿ ನಾಡಿಗೆ ದೊಡ್ಡದು
ನಾಳೇ ತಂಗೆಮ್ಮ ಕಳಪಿಕೊಡರಿ । ಸುವೇಲಾಲಿ ।

ಅಣ್ಣ ತಂಗಿ ಇಬ್ಬರು ಸೇರಿ ದಾರಿಹಿಡಿದು ಬರುವಾಗ
ಯ್ಯಾವಾಗ ನೋಡಿನ ತಾಯಿ ಮಾರಿ । ಸುವೇಲಾಲಿ ।

ಅಣ್ಣ ತಂಗಿ ಜೋಡಲಿ ಬರುವಾಗ
ಯ್ಯಾವಾಗ ನೋಡಿನ ಗೆಳತಿಯ ಮಾರ । ಸುವೇಲಾಲಿ ।

ಹೀಗೆ ನಾಗರಪಂಚಮಿ ನಾಡಿಗೆ ದೊಡ್ಡದು ಎಂದು ಹೇಳಿ, ಅವಳ ಅತ್ತೆ, ಮಾವ ಮತ್ತು ಗಂಡನನ್ನು ಕೇಳಿ ತಂಗಿಯನ್ನು ಕರೆದುಕೊಂಡು ಅಣ್ಣ ಬರುತ್ತಾನೆ.

ಉತ್ತರ ಕರ್ನಾಟಕದಲ್ಲಿ ಶ್ರಾವಣ ಶುದ್ಧ ಚೌತಿ ಪಂಚಮಿ ದಿನದಂದು ನಾಗಪೂಜೆ ಮಾಡುತ್ತಾರೆ. ಹಬ್ಬದ ಬೆಳಿಗ್ಗೆ ಎದ್ದು ಎಲ್ಲರು ಸ್ನಾನಮಾಡಿಕೊಂಡು ಹೊಸಬಟ್ಟೆ ಉಟ್ಟುಕೊಂಡು ಸೌಭಾಗ್ಯದ ಚಿನ್ಹೆಗಳನ್ನು ಧರಿಸಿಕೊಂಡು ನಾಗಪ್ಪನ ಪೂಜೆಗೆ ಅರಳು ಹಿಟ್ಟು, ಎಳ್ಳುಂಡೆ, ಶೇಂಗಾದುಂಡೆ ಇತ್ಯಾದಿ ಪ್ರಮುಖವಾದದನ್ನು ಮಾಡುತ್ತಾರೆ. ಅರಿಷಿಣ, ಕುಂಕುಮ, ಹೂವು, ಕೇದಿಗೆ, ಗರಿಕೆ, ಹತ್ತಿ ಎಳೆ ಎಲ್ಲವನ್ನು ಕಲ್ಲಿನ ನಾಗಪ್ಪನಿಗೆ, ನೈವೇದ್ಯಕ್ಕೆ ಇಟ್ಟು ಪೂಜಿಸಿ ಹಾಲನ್ನು ಎರೆಯುತ್ತಾರೆ. ನಂತರ ಅಲ್ಲಿಯೇ ಕುಳಿತುಕೊಂಡು ಪ್ರಸಾದ ತಿಂದು ನಾಗಪ್ಪನ ಕುರಿತು ಹಾಡುಗಳನ್ನು ಹಾಡುತ್ತಾರೆ.

ಹಾಲಿನ ಗಿಂಡಿ ಬಲಗೈವ್ವ
ಗಂಧದ ಬಟ್ಟಲು ಹಿಡಿದರವ್ವ
ನಾಗಪ್ಪಗ ಅವರು ಬಂದರವ್ವ

ಹಾಲಿನ ಗಿಂಡಿ ಹಿಡಿದರವ್ವ
ನಾಗಪ್ಪಗಹಾಲು ಎರೆದಾರವ್ವ"

ಹೀಗೆ ಮನೆ ಮಂದಿಯಲ್ಲ ಸೇರಿ ನಾಗಪ್ಪನಿಗೆ ಹಾಲು ಹೊಯ್ಯುವರು. ನಮ್ಮನ್ನು ರಕ್ಷಿಸು ಎಂದು ಬೇಡಿಕೊಳ್ಳುವರು. ಅಲ್ಲೇ ಇದ್ದಂತಹ ಜನರಿಗೆ ಕಡಲೆ ಉಂಡೆ, ಎಳ್ಳುಉಂಡೆ, ಕೊಬ್ಬರಿ, ಉತ್ತತ್ತಿ ಪ್ರಸಾದ ಕೊಡುವರು. ನಂತರ ಮನೆಗೆ ಬಂದು ಎಲ್ಲರೂ ಸೇರಿ ಹುಗ್ಗಿ ಇಲ್ಲವೆ ಹೋಳಿಗೆ ಊಟ ಮಾಡಿ ಸಾಯಂಕಾಲ ಗೆಳತಿಯರೊಂದಿಗೆ ಸುಖ ಸಂತೋಷವನ್ನು ಹಂಚಿಕೊಳ್ಳುತ್ತಾರೆ.

## ಮೊಹರಂ ಸಂಪ್ರದಾಯ

ಮುಸ್ಲಿಂ ಬಾಂಧವರು ಆಚರಿಸುವ ಹಬ್ಬಗಳಲ್ಲಿ ಮೊಹರಂ ಹಬ್ಬ ವಿಶಿಷ್ಟವಾದುದ್ದು ಮತ್ತು ಭಾವೈಕ್ಯತೆಯ ದ್ಯೋತಕವಾದುದು. ಮೊಹರಂ ಎಂಬ ಶಬ್ದ ತಿಂಗಳಿಗೆ ಅನ್ವಯವಾಗುವ ಹೆಸರು. ಇಸ್ಲಾಂ ಧರ್ಮದವರಿಗೆ 'ಮೊಹರಂ' ಮೊದಲು ತಿಂಗಳಾಗಿದ್ದು ಈ ತಿಂಗಳಿನಲ್ಲಿ ಒಂದರಿಂದ ಹತ್ತನೆಯ ತಾರೀಖಿನವರೆಗೆ ಹತ್ತು ದಿನಗಳ ಕಾಲ ಈ ಹಬ್ಬವನ್ನು ಆಚರಿಸುವರು. "ದೇವರ ಅನುಯಾಯಿಗಳಾದ ಜನ ಸತ್ಯವಂತರೆಂದು ತೋರಿಸುವ ಪವಾಡ ಮೆರೆಯಲು ಮಸಿದಿಯ ಮುಂದೆ ತುಳಿದಾಡಲಿಕ್ಕೆ ಬೆಂಕಿಗೆ ಅಲಾಲ್ ಎನ್ನುವುದರಿಂದ ಅಲಾಬಿ ಇಲ್ಲವೆ ಅಲಾವಿ ಹಬ್ಬವೆಂದೂ ಇದಕ್ಕೆ ಹೆಸರು ಬಂದಿದೆ."

ಕರ್ನಾಟಕದ ಎಲ್ಲಾ ಕಡೆಗಳಲ್ಲಿ ಈ ಹಬ್ಬ ಸಾಂಸ್ಕೃತಿಕ ಹಬ್ಬವಾಗಿ ಬೆಳೆದು ಬಂದಿದೆ. ಹಿಂದೂ ಹಬ್ಬಗಳ ಪ್ರಭಾವ ಈ ಹಬ್ಬದಾಚರಣೆಯ ಮೇಲೆ ಪರಿಣಾಮ ಬೀರಿರುವುದರಿಂದ ಇದೊಂದು ಹಿಂದೂ ಮತ್ತು ಮುಸ್ಲಿಂ ಭಾವೈಕ್ಯತೆಯ ಹಬ್ಬವಾಗಿ ಪರಿವರ್ತನೆಗೊಂಡಿದೆ.

ಕೆಲವು ಪ್ರದೇಶಗಳಲ್ಲಿ ಮೊಹರಂ ಹಬ್ಬದ ತಿಂಗಳ ಪ್ರಾರಂಭವಾಗುವ ಸುಮಾರು ಎಂಟು-ಒಂಬತ್ತು ದಿನಗಳ ಮೊದಲೇ ಮನೆಯ ಹೆಣ್ಣು ಮಕ್ಕಳು ಮನೆಯ ಯಜಮಾನರ ಮಾರ್ಗದರ್ಶನದಲ್ಲಿ ಮನೆಗಳಿಗೆ ಸುಣ್ಣ - ಬಣ್ಣ ಬಳಿದು ಸ್ವಚ್ಛಗೊಳಿಸುವರು. ಅಮವಾಸ್ಯೆ ಕಳೆದು ಚಂದ್ರ ಕಾಣಿಸಿಕೊಂಡ ಮೊದಲ ದಿನದಿಂದ ಹತ್ತು ದಿನಗಳವರೆಗೂ ಕೆಲವರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಉಪವಾಸವಿದ್ದು, ಶರಬತ್ ಮಾಡಿ ಎಲ್ಲಾ ಭಕ್ತಾದಿಗಳಿಗೆ ಹಂಚುವರು. ಹಾಗೆಯೇ ಒಂಬತ್ತು ಮತ್ತು ಹತ್ತನೆಯ ದಿನ ಬೆಳಿಗ್ಗೆ ಎಂಟು ಗಂಟೆಗೆಲ್ಲ ಸ್ನಾನ ಮಾಡಿ, ಹತ್ತು ಹನ್ನೊಂದು ಗಂಟೆಗೆ ಹಸೇನ್ - ಹುಸೇನ್‌ರವರ ಹೆಸರಿನಲ್ಲಿ "ಅಶರಕಿ ಚಾರ್ ರಕಾತ್" ನಮಾಜ್ ಮಾಡುವರು. ಹೊಸದಾಗಿ ಹರಕೆ ಹೊತ್ತ ಭಕ್ತರು ಮತ್ತು ಮಸೀದಿಯ ಶಹೀದ್ ಆದವರ ಸ್ಮಾರಕಾರ್ಥವಾಗಿ ಮೂರ್ತಿ ಸ್ವರೂಪದ ರಾಗಲ್ ಆಕಾರದ ತಾಮ್ರ, ತವರು, ಇಲ್ಲವೆ ಬೆಳ್ಳಿ ಅಥವಾ ತಾಮ್ರದ ತಗಡಿನಿಂದ ಮಾಡಿದವುಗಳಾಗಿರುತ್ತವೆ. ಇವು ಕರ್ಬಲಾ ಕಾಳಗದಲ್ಲಿ ವೀರಮರಣ ಹೊಂದಿದ ಹಸನ್ ಹುಸ್ಸೇನು ಮದಾರಸಾಬ, ಅಬ್ಬಾಸಲಿ, ಕಾಶೀಮಸಾಬ, ಅಲಿಅಕ್ಬರ, ಹಸ್ತಗಳ ನೆನಪು ತರುವ ಸಂಕೇತಗಳಾಗಿವೆ. ಈ ಸಂಕೇತಗಳನ್ನು ರಂಗು ರಂಗಿನ ಬಟ್ಟೆಗಳಿಂದ ಸಿಂಗಸಿರುತ್ತಾರೆ. ಸಾಯಂಕಾಲ ವಾದ್ಯ ಮತ್ತು ಹಲಿಗೆ ಬಾರಿಸುವ ಮೊದಲೇ ಗೊತ್ತು ಪಡಿಸಿರುವ ಜಾಗದಲ್ಲಿ ಹಿಂದೂ ಮುಸ್ಲಿಂ ಅವರು ಭೇದವಿಲ್ಲದೆ ದೇವರುಗಳನ್ನು ಕೂಡಿಸಿ ಅಲಾಯಿ ಕುಣಿಯನ್ನು ತೆಗೆಯುವರು.

"ಅಲಾಯಿಯ ಚಂದನ ನೋಡಿ
ಗುದ್ದಲಿ ಹಾಕ್ಯಾಲಿ ದಿನ ನೋಡಿ'

ಹೀಗೆ ಅಲಾಯಿ ಕುಣಿ ತೆಗೆದ ನಂತರ ಅದರೊಳಗೆ ದೊಡ್ಡ ದೊಡ್ಡ ಕಟ್ಟಿಗೆ ಹಾಕಿ, ನಂತರ ಬೆಂಕಿಯನ್ನು ಹಚ್ಚುತ್ತಾರೆ. ಮರುದಿನ ಎಲ್ಲಾ ಭಕ್ತಾದಿಗಳು ಸೇರಿ ಪೂಜೆ ಪುನಸ್ಕಾರ ಮಾಡಿ ಮೊಹರಂ ಹಬ್ಬದ ಹಾಡುಗಳನ್ನು ಹಾಡುತ್ತಾರೆ.

ಶ್ರೀಮಂತ ಗುರುವಿಗೆ ಸಲಾಂ
ಶಿವಶರಣಗೆ ಶಿರಬಾಗಿ ಮಾಡುವೆ ಸಲಾಂ ॥

ಸಾಕ್ಷಾತ್ ಪ್ರಭುವಿಗೆ ಸಲಾಂ ಸಭಾದವರಿಗೆ ಸಲಾಂ
ಸನ್ಮಾರ್ಗ ತೋರಿದ ಸಜ್ಜನರಿಗೆ ಮಾಡುವೆ ಸಲಾಂ ॥

ತಂದೆ ತಾಯಿಗಳಿಗೆ ಸಲಾಂ
ಆನಂದದಿಂದ ವಂದಿಸಿ ಮಾಡುವೆ ಸಲಾಂ ॥

ಬಂದು ಬಾಂಧವರೆ ಸಲಾಂ ಮುಸ್ಲಿಂಮರೆ ಸಲಾಂ
ಬಂಧೂರ ದೈವಕ್ಕೆ ಬಹು ಚಂದದಿ ಮಾಡುವೆ ಸಲಾಂ ॥

ಸಯ್ಯದ್ ಹುಸೇನಿಗೆ ಸಲಾಂ
ಸದ್ಗುರುವಿಗೆ ನಮ್ಮ ದೌಲತ್ ಪುರಶಾಹೀರಗೆ ಸಲಾಂ ॥

ಸಣ್ಣ ಬಾಲಕರೆ ಸಲಾಂ ಸಾರಿ ಹೇಳುವೆನು ಖಲಾಂ
ಸನ್ಮಾರ್ಗದಿಂದಲಿ ಶ್ರೀರಾಮಸಾಗರಕ್ಕೆ ಸಲಾಂ"

ಹೀಗೆ ಎಲ್ಲಾ ಭಕ್ತಾದಿಗಳು ಸೇರಿ ಶಿವಶರಣಗೆ, ತಂದೆ ತಾಯಿಗಳಿಗೆ, ಬಂಧು ಬಾಂಧವರಿಗೆ ಸಲಾಂ ಎಂದು ಮಾಡಿಕೊಂಡ ಹರಕೆಯಂತೆ ಹಸಿರುಬಟ್ಟೆ, ವೀಳ್ಯೆದೆಲೆ, ಕರ್ಜಿಕಾಯಿಹಾರ, ನೋಟಿನಹಾರ, ಹೂವಿನ ಹಾರ ಇತ್ಯಾದಿಗಳನ್ನು ದೇವರುಗಳಿಗೆ ಹಾಕುವರು.

ಸಾಯಂಕಾಲ ಹಿಂದೂ ಮುಸ್ಲಿಂರು ಗಂಡು – ಹೆಣ್ಣು ಮಕ್ಕಳು ಸೇರಿ ದೇವರಿಗೆ ಹಸಿರುಲಾಡಿ, ಬೆಲ್ಲ – ಸಕ್ಕರೆ ತೆಗೆದುಕೊಂಡು ದೇವರಿಗೆ ಅರ್ಪಣೆಯಾಗಿ ಕೊಡುತ್ತಾರೆ. ಆಗ ಪೂಜಾರಿ ಲೋಬಾನದಿಂದ ಮಂತ್ರಿಸಿ ನವಿಲುಗರಿಯಿಂದ ಆಶೀರ್ವಾದ ಮಾಡಲು ಭಯ ಭಕ್ತಿಯಿಂದ ದೇವರಿಗೆ ಕೈ ಮುಗಿದು, ಓದಿಕೆ ಸಕ್ಕರೆಯನ್ನು ಅಲ್ಲಿ ಇದ್ದಂತಹ ಜನರಿಗೆ ಹಂಚಿ ಹಸಿರು ಲಾಡಿ ಧರಿಸಿಕೊಂಡು ಫಕೀರರಾಗುವರು.

"ಆಗೇ ಬಾಗೇಕಿ ದೂರ್ ಮೇ ಕೈಸೀ ಕಯಾಮತ್ ಹೋಗಯಿ
ಕೈಸಿ ಕಯಾಮತ್ ಹೋಗಯಿ
ಹಜರತ್ ಪೈಗಂಬರ್ಕಿ ಬಚ್ಚೊಂಕಿ ಷಹದತ್ ಹೋಗಯಿ
ದೌಡ್ತಾಹುವಾ ಘೋಡಖೂನ್ಸೆಡುಬಾ
ಇಸ್ ಘೋಡೇಕೆ ಸವಾರ್ಕು ಮೈದೇಕ್ತಿರೋಯಿ
ಸರ್ಪಟಕ್ತೆ ಓಮಾಕೈಸಿ ತಕ್ಲೀಫ್ ದಾಲ್ಕೇಯಾ ಅಲ್ಲಾ"

ಹೀಗೆ ಮೊದಲಿನಿಂದ ಕೊನೆಯವರೆಗೆ ಈ ಕಾರ್ಯ ನಡೆಯುತ್ತದೆ.

ಪೂಜೆ ಆದ ನಂತರ ಬೆಳಗಿನಿಂದ ರಾತ್ರಿಯವರೆಗೆ ಮೆರವಣಿಗೆ ನಿಧಾನವಾಗಿ ಸಾಗುತ್ತದೆ. ಮನೆಯ ಸ್ತ್ರೀ ಮತ್ತು ಮಕ್ಕಳು ಭಯ – ಭಕ್ತಿಯಿಂದ ಉತ್ಸುಕರಾಗಿ ಮೆರವಣಿಗೆಯಲ್ಲಿ ಭಾಗವಹಿಸುವರು. ಭೇಧ ಭಾವವಿಲ್ಲದೆ ಎಲ್ಲಾ ಜನರು ಸಕ್ಕರೆ – ಬೆಲ್ಲ, ಚೂರುಮುರಿ ಕೊಟ್ಟು ಫಾತೇಹ ಓದಿಸುವರು. ಹರಕೆ ಹೊತ್ತವರು ದೇವರಿಗೆ ಅಡ್ಡ ಬೀಳುವರು. ದೇವರು ಹೊತ್ತವರು ಅವರ ಮೇಲೆ ದಾಟಿಕೊಂಡು ಹೋಗುವರು.

ಮರುದಿವಸ ಬೆಳಿಗ್ಗೆ ಒಂಬತ್ತು ಅಥವಾ ಹತ್ತು ಗಂಟೆಯ ಸುಮಾರಿಗೆ ಶರಬತ್ ಹಾಗೂ ನೆನಸಿದ ಅಕ್ಕಿಯಲ್ಲಿ ಎಳ್ಳು ಸೇರಿಸಿ ಭಕ್ತಾದಿಗಳಿಗೆ ಪುನಃ ಹಂಚುತ್ತಾರೆ. ಎಲ್ಲಾರು 'ಸಲಾಂ' ಗೀತೆಯನ್ನು ಹಾಡುತ್ತಾರೆ.

ಮುಸ್ತಫಾ ಜಾನೆ ರಹೇಮತ್ ಪೇ ಲಾಖೋ ಸಲಾಂ
ಸಮೈಬಜ್ ಮೆ ಷಹದತ್ ಪೇ ಲಾಖೋ ಸಲಾಂ
ಜಬ್ ಸುಹಾನೀ ಖಡಾ ತೈಬಾಖಾ ಚಾಂದ್
ಉಸ್‌ದಿಲ್ ಹರ್‌ರೋಜ್ ಯೇ ಷಹದತ್ ಪೇ
ಲಾಕೋ ಸಲಾಂ ॥ ಮುಸ್ತಫಾ ॥

ಹೀಗೆ ಶೋಕದ ಗೀತೆಗಳನ್ನು ಹಾಡುತ್ತಾ ಪೈಗಂಬರ್‌ರವರ ಪಾದಕ್ಕೆ ಲಕ್ಷಾಂತರ ವಂದನೆಗಳು ಎಂದು ಬೇಡಿಕೊಂಡು ಚಂದ್ರನ ಪ್ರತಿದಿನ ಅಂತ್ಯಕ್ಕೆ ನಮೋನಮೋ ಎಂದು ಬೇಡಿಕೊಳ್ಳುವರು.

ಮೆರವಣಿಗೆ ಮುಗಿದ ಮೇಲೆ ಅಲಾಯಿ ಕುಣಿಯುತ್ತಾರೆ. ಆಗ ಹಲಗೆ ನಾದ ಈ ರೀತಿಯಾಗಿ ಕೇಳಿ ಬರುತ್ತದೆ.

"ಜಜ್ಜ ಹೊಡಗ ತಕ್ಕ ತಕ್ಕ ಜಂಗ ತಕ್ಕ ತಕ್ಕ ತಕ್ಕ
ಜಜ್ಜ ಹೊಡಗ ತಕ್ಕ ತಕ್ಕ ಜಂಗ ತಕ್ಕ ತಕ್ಕ ತಕ್ಕ"

ಹೀಗೆ ಕಲಾವಿದರು ಹಲಗೆ ಬಡೆಯುತ್ತಾ ಕುಣಿಯುತ್ತಾರೆ. ಇದರಲ್ಲಿ ಹಿಂದೂಗಳು ಸರಿಸಮಾನವಾಗಿ ಭಾಗವಹಿಸುವುದೊಂದು ವಿಶೇಷ. ಮುಸ್ಲಿಂರು

ಹಾಡುಗಾರಿಕೆಯಲ್ಲಿ ತೊಡಗಿದರೆ, ಹಿಂದುಗಳು ಕುಣಿತದಲ್ಲಿ ತೊಡಗಿರುತ್ತಾರೆ. ಕೆಲವರು ಹುಲಿವೇಷ ಧರಿಸಿ ಕುಣಿಯುತ್ತಾರೆ.

ಕೊನೆಯ ದಿನ ಸಂಜೆ ನಾಲ್ಕು ಐದು ಗಂಟೆಗೆ ದೇವರು ಏಳುವ ಮುನ್ನ ಅಲಾಯಿ ಕುಣಿಯನ್ನು ಪೂಜಿಸಿ ಅದರಲ್ಲಿ ಸಣ್ಣದಾದ ಮಣ್ಣಿನ ಮಡಿಕೆ ತಂದು ಅದರೊಳಗೆ ಐವತ್ತು ಪೈಸೆಹಾಕಿ ಬೆಲ್ಲದ ನೀರು ತುಂಬಿ ಅದರ ಮೇಲೆ ಮುಚ್ಚಿಡುವರು. ಹೀಗೆ ಮುಚ್ಚಿಡುವುದಕ್ಕೊಂದು ನಂಬಿಕೆಯಿದೆ : 'ಕರ್ಬಲಾ ಯುದ್ಧದಲ್ಲಿ ಇಮಾಮ ಹುಸೇನರ ಲೌಕಿಕಾಸೆ ಇಟ್ಟುಕೊಂಡಿದ್ದವರ ಆತ್ಮಗಳು ಈ ದುಡ್ಡು – ಬೆಲ್ಲದ ನೀರಿನಿಂದ ಬಿಡುಗಡೆ ಹೊಂದಿ ಸ್ವರ್ಗ ಸೇರಲಿ ಎಂಬ ಭಾವನೆ ಇದೆ. ಸಣ್ಣ ಮತ್ತು ದೊಡ್ಡ ಮಕ್ಕಳು ಫಕೀರಾಗಲು ಧರಿಸಿದ ಹಸಿರು ಲಾಡಿಗಳನ್ನು ಬಿಚ್ಚಿ ಅಲಾಯಿ ಕುಣಿ ಮುಚ್ಚಿದುದರ ಮೇಲೆ ಹಾಕುತ್ತಾರೆ.

ಎಲ್ಲಾ ಜನರು ಬಂದು ಅಲಾಯಿ ಕುಣಿಯನ್ನು ಮುಚ್ಚುತ್ತಾರೆ. ಕೆಲವರು ಭಕ್ತಿಯಿಂದ ಬೇಡಿಕೊಂಡು ಉಪ್ಪು ಹಾಕುತ್ತಾರೆ. ಹೀಗೆ ಅಲಾಯಿಕುಣಿ ಮುಚ್ಚಿದ ಮೇಲೆ ಅದರ ಮೇಲೆ ಸಣ್ಣದಾದ ಬಾರಿಗಿಡವನ್ನು ಇಟ್ಟು ಪಕ್ಕದಲ್ಲಿ ಒಂದು ಕಲ್ಲನ್ನು ಇಡುತ್ತಾರೆ.

### ಖತಲ್ ರಾತ್ರಿ

ಉತ್ತರ ಕರ್ನಾಟಕದ ಪ್ರದೇಶದಲ್ಲಿ ಹಜರತ್ ಇಮಾಮ್ ಹುಸೇನರ ಅನುಯಾಯಿಗಳು ಯಜೀದ್‌ನ ಸೈನಿಕರ ವಿರುದ್ಧ ಹೋರಾಡಿ ಹುತಾತ್ಮರಾದ ನೆನಪಿಗಾಗಿ ಖತಲ್ ರಾತ್ರಿ ಆಚರಿಸುತ್ತಾರೆ. ಹರಕೆಯನ್ನು ಹೊತ್ತವರು, ಆ ದಿನದಂದು ಮಡಿನೀರು ತಂದು ಮಾದ್ಲಿ, ಅನ್ನ, ಕಿಚಡಿ, ತೆಂಗಿನಕಾಯಿ, ಲಿಂಬೆಹಣ್ಣು ಮುಂತಾದ ನೈವೇದ್ಯಗಳನ್ನು ದೇವರಿಗೆ ಅರ್ಪಿಸುವರು, ಭಕ್ತಾದಿಗಳೆಲ್ಲ ದೇವರು ಕೂಡಿಸುವ ಸ್ಥಳದಲ್ಲಿ ಎಣ್ಣೆದೀಪ ಹಚ್ಚಿಟ್ಟು 'ಲೋಬಾನ; ಹೊಗೆ ಹಾಕುವರು. ಪುನಃ ಸಂಜೆ ಆರು ಏಳು ಗಂಟೆಗೆ ಭಕ್ತಾದಿಗಳೆಲ್ಲ ಸೇರಿ ಹಾಡುಗಳನ್ನು ಹಾಡುವರು.

ಶರಣರೆಲ್ಲರು ಕೂಡಿ ಇನ್ನು ಸೇಕ್ಯಾರು ಮದೀನಕ್ಕೆ
ಹೈ ಹುಸೇನ ಹೈ ಹುಸೇನ ದುಃಖ ಮಾಡುತ್ತಾರೆ
ಆಲ್ ಬಿದಾ ಆಲ್ ಬಿದಾ ಹೈ ಆಲ್ ಬಿದಾ ಹೈ"

ಎಂದು ಹೇಳಿ ಎಲ್ಲಾ ಭಕ್ತಾದಿಗಳು ಸಣ್ಣ ದೊಡ್ಡ ದೇವರುಗಳನ್ನು ಒಂದು ಕಡೆಗೆ ಸೇರಿಸುತ್ತಾರೆ. ಆಗ ದೊಡ್ಡ ಮೆರವಣಿಗೆಯಾಗಿ ಹಸನ್ ಹುಸೇನರ ಸಾಹಸ ಶೌರ್ಯ, ತ್ಯಾಗ, ಬಲಿದಾನದ ಯುದ್ಧದ ಕರುಣಾಮಯ ಸನ್ನಿವೇಶಗಳನ್ನೆಲ್ಲ ದುಃಖದ ರೀತಿಯಲ್ಲಿ ವಿವರಿಸುತ್ತಾರೆ. ಹಳ್ಳ, ಹೊಳೆ ಅಥವಾ ಬಾವಿಗೆ ಹೋಗಿ ಎಲ್ಲಾ ಚಿಕ್ಕ ದೊಡ್ಡ ದೇವರುಗಳನ್ನು ನೀರಿನಲ್ಲಿ ತೊಳೆದು ಎಲ್ಲಾ ಸಾಮಾನುಗಳನ್ನು ಬಿಚ್ಚಿ ಕಟ್ಟಿಕೊಂಡು ಮೌನವಾಗಿ ಬರುತ್ತಾರೆ.

ಹೀಗೆ ಜನಪದರು ಹಿಂದೂ ಮುಸ್ಲಿಂ ಬಾಂಧವರು ಭಾವೈಕ್ಯತೆಯ ದ್ಯೋತಕವಾಗಿ ಮೊಹರಂ ಹಬ್ಬವನ್ನು ಆಚರಿಸುತ್ತಾ ಬಂದಿದ್ದಾರೆ. ದೇವರನ್ನು ಕೂಡಿಸುವುದು, ದೇವರನ್ನು ಹೊರುವುದು, ಹೆಜ್ಜೆ ಹಾಕುವುದು, ಕುಣಿಯುವುದು ಈ ಎಲ್ಲಾ ಕಾರ್ಯಕ್ರಮಗಳನ್ನು ಹಿಂದೂಗಳು ಅತ್ಯಂತ ಉತ್ಸಾಹದಿಂದ ಆಚರಿಸುತ್ತಾ ಬಂದಿರುವುದು ಇಂದಿಗೂ ಕಂಡುಬರುತ್ತದೆ.

**ಆಕಾರ ಗ್ರಂಥಗಳು :**


೧) ಚನ್ನಣ್ಣ ವಾಲೀಕಾರ : ಸಮಗ್ರ ಜಾನಪದ

೨) ಹಿ. ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜನಪದ ಕಲೆಗಳ ಕೋಶ

೩) ಷಹಿಸೀನಾ ಬೇಗಂ : ಕರ್ನಾಟಕ ಮುಸ್ಲಿಂ ಜಾನಪದ

೪) ಬಸವರಾಜ ಪೋಲೀಸ್ ಪಾಟೀಲ : ಹೈದರಾಬಾದ ಕರ್ನಾಟಕ ಜನಪದ ಸಾಹಿತ್ಯ

೫) ಕೆ. ರುದ್ರಪ್ಪ : ಬಳ್ಳಾರಿ ಜಿಲ್ಲೆಯ ಜನಪದ ಸಾಹಿತ್ಯ

೬) ಬಿ. ಎಸ್. ಗದ್ದಗಿಮಠ : ಕನ್ನಡ ಜಾನಪದ ಗೀತೆಗಳು


■■

ನಮ್ಮ ನಡುವಿನ ನಗುಮೊಗದ ಪ್ರಶಾಂತ ಮನಸ್ಸಿನ ಜಿ. ಎಸ್. ಬಿಜಾಪೂರ ಸರ್ ಬೇವೂರಿನ ಆದರ್ಶ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ಅಕ್ಷರ ಬೆಳಕನ್ನು ಹಂಚಿದವರು. ಕನ್ನಡ ಸಾಹಿತ್ಯದ ಕೇಂದ್ರೀಯತೆಯನ್ನು ಒಲುಮೆಯಿಂದ ಧಾರೆಯೆರೆದವರು. ದಕ್ಷ ಆಡಳಿತಗಾರರಾಗಿ, ಪದವಿಪೂರ್ವ ಶಿಕ್ಷಣ ಇಲಾಖೆಂಯ ಮಹಾಮಂಡಳದ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ತಮ್ಮ ಕ್ರಿಯಾಶೀಲತೆಗೆ ಗರಿ ಮೂಡಿಸಿಕೊಂಡವರು. ಇದಕ್ಕೆ ಸಾಕ್ಷಿ ಪ್ರಜ್ಞೆಯಂತೆ ಅವರ ಸಾರಥ್ಯದಲ್ಲಿ ನಿರ್ಮಾಣವಾಗಿರುವ ಪದವಿ ಪೂರ್ವ ಕಾಲೇಜುಗಳ 'ಜಿಲ್ಲಾ ನೌಕರರ ಭವನ' ನಮ್ಮೆದುರಿಗಿದೆ.

ಉತ್ಕಟ ಪ್ರೀತಿ, ವಿಶ್ವಾಸದ ಜೀವನೋತ್ಸಾಹದ ಬಿಜಾಪೂರ ಅವರು ತಮ್ಮ ಸುದೀರ್ಘ ಸೇವೆಯಿಂದ ನಿವೃತ್ತರಾಗುತ್ತಿರುವ ಸಂದರ್ಭದಲ್ಲಿ ಅವರ ಒಡನಾಡಿಗಳು 'ತಂಬೆಲರು' ಎಂಬ ಅಭಿನಂದನ ಗ್ರಂಥವನ್ನು ಲೋಕಾರ್ಪಣೆ ಮಾಡುತ್ತಿರುವುದು ಸಾರ್ಥಕವೆನಿಸಿದೆ.

'ತಂಬೆಲರು' ಬಿಜಾಪೂರ ಅವರ ವ್ಯಕ್ತಿತ್ವದ ಅಸ್ಮಿತೆಯನ್ನು ಸಾಕ್ಷೀಕರಿಸುವ, ಅವರ ಹೃದಯವಂತಿಕೆ, ಸಹಾನುಭೂತಿ, ಶೈಕ್ಷಣಿಕ ಕಾಳಜಿಯ ಅಂತರಂಗದ ಪ್ರಭೆಯನ್ನು ಬಹಿರಂಗದ ಚೆಲುವು ಎಂಬಂತೆ ಪ್ರತಿಬಿಂಬಿಸುವುದಾಗಿದೆ. "ಸಾಹಿತ್ಯ ಮತ್ತು ಶಿಕ್ಷಣ" ಈ ಗ್ರಂಥದ ಪ್ರಧಾನ ಧಾರೆ ಎಂಬಂತಿರುವ, ಅಧ್ಯಯನ ಮಾಡಬಯಸುವವರಿಗೆ ಉತ್ತಮವಾದ ಒಂದು ಪ್ರವೇಶಿಕೆಯಂತಿದೆ.

ಇದರೊಟ್ಟಿಗೆ ಕೃಷಿ ಮತ್ತು ಸಂಕೀರ್ಣ ವಿಷಯ ವೈವಿಧ್ಯತೆ, ಬಿಜಾಪೂರ ಅವರ ಸಂಬಂಧ, ಪ್ರಭಾವ, ಸಂವೇದನೆ, ಸಖ್ಯ, ಸಂವಹನ ಕುರಿತಾಗಿ ಕುಟುಂಬದವರು, ಆಪ್ತರು, ಶಿಷ್ಯರು, ಆತ್ಮೀಯರು ಬರೆದ ಬರಹಗಳು, ಕವಿತೆಗಳು ಬಿಜಾಪೂರರ ಸಮೃದ್ಧ ವ್ಯಕ್ತಿತ್ವವನ್ನು ಅನಾವರಣಗೊಳಿಸುವಲ್ಲಿ ಗಮನಾರ್ಹವೆನಿಸುವಂತಿವೆ.

ಅಬ್ಬಾಸ್ ಮೇಲಿನಮನಿ

ತ್ವರಿತ ಮುದ್ರಣ, ಗದಗ